<u>ದಿನಾಂಕ ಃ 26.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಗಿದೆ.</u>

ಪಿ. ಡಬ್ಲ್ಯೂ: 3.

**<u>ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

9. ಸದರಿ ನಿಪಿ.6 ಪಂಚನಾಮೆಗೆ ಸಹಿ ಮಾಡುವ ಸಮಯದಲ್ಲಿ, ನಮ್ಮನ್ನು ಬಿಟ್ಟು ಬೇರೆ ಯಾರೂ ಇರಲಿಲ್ಲ. ಪೊಲೀಸರು ವಶಪಡಿಸಿಕೊಂಡ ಬಟ್ಟೆಗಳನ್ನು ಗುರುತಿಸಲು ನನಗೆ ಸಾಧ್ಯವಿಲ್ಲ. ಮುದ್ದೆಮಾಲು.3 ರಿಂದ 6 ಬಟ್ಟೆಗಳನ್ನು ನನಗೆ ಗುರುತಿಸಲು ಆಗುವುದಿಲ್ಲ. ಅವುಗಳು ಯಾರಿಗೆ ಸೇರಿದೆ ಎಂದು ನನಗೆ ಗೊತ್ತಿಲ್ಲ. ಮುದ್ದೆಮಾಲು.7 ನ್ನು ನಾನು ನೋಡಿಲ್ಲ. ಮುದ್ದೇಮಾಲು 1 ಮತ್ತು 2 ನ್ನು ನಾನು ನೋಡಿಲ್ಲ. ಮಹದೇವಮ್ಮ ತೀರಿಕೊಂಡ ಬಗ್ಗೆ ಪೊಲಿಸರು ನನ್ನಿಂದ ಮಾಹಿತಿ ಪಡೆದಿಲ್ಲ. ಮಹದೇವಮ್ಮ ತೀರಿಕೊಂಡ ವಿಚಾರದಲ್ಲಿ, ಯಾರ ಮೇಲೆ ಪ್ರಕರಣ ದಾಖಲಾಗಿದೆ ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸಾ.ಅ ರವರು ಸಾಕ್ಷಿ ಹೇಳಿಕೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಎಂದು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಗಿದೆ).

**<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

10. ದಿಃ 03.08.2022 ರಂದು ಮಹದೇವಮ್ಮ ಕಿರುಚಾಡುತ್ತಿದ್ದರು ಎಂದರೆ ಸಾಕ್ಷಿಯು, ನನಗೆ ದಿನಾಂಕ ಜ್ಞಾಪಕವಿಲ್ಲ ಎಂದು ಹೇಳುತ್ತಾರೆ. ಆರೋಪಿ ಸಿದ್ದೇಗೌಡರವರು, ಮಹದೇವಮ್ಮ ರವರಿಗೆ ಬೆಂಕಿ ಹಚ್ಚಿ ಓಡಿ ಹೋಗಿದ್ದು, ಸದರಿ ಬೆಂಕಿ ಹತ್ತಿಕೊಂಡಿದ್ದರಿಂದ ಅವರು ಕಿರುಚಾಡುತ್ತಿದ್ದರು ಎಂದರೆ ಸಾಕ್ಷಿಯು, ನಾನು ಸದರಿ ಮಹದೇವಮ್ಮ ರವರ ಸಹಾಯಕ್ಕೆ ಹೋಗಿದ್ದೆನು ಎಂದು ಹೇಳುತ್ತಾರೆ. ಆರೋಪಿಯ ಮಗ ಪ್ರಾಸಾ.1 ರವರನ್ನು ವಿಚಾರಿಸಿದಾಗ, ಆ ದಿನ ಸಂಜೆ 7.00 ಗಂಟೆ ಸಮಯದಲ್ಲಿ ತಾನು ಹಾಗೂ ತನ್ನ ತಾಯಿ ಮಹದೇವಮ್ಮ ಮನೆಯ ಹಾಲ್ ನಲ್ಲಿ ಕುಳಿತಿದ್ದಾಗ, ನಮ್ಮ ತಂದೆ ಸಿದ್ದೇಗೌಡರು ಏಕಾಏಕಿ ಮನೆಗೆ ನುಗ್ಗಿ, ಬೋಳಿ ಮಕ್ಕಳ, ಸೂಳೆ ಮಕ್ಕಳಾ, ಅವ್ವ ಮಗನಿಗೆ, ಈ ಮನೆ ಕಟ್ಟಿ ಸಾಕಾಗಿತ್ತಾ, ಈ ಮನೆ ನನ್ನದು, ನೀವಿಬ್ಬರು ಮನೆಯಿಂದ ಹೊರಗೆ ಹೋಗಿ ಎಂದು ಬೈಯುತ್ತಾ, ತನ್ನ ಜೊತೆಯಲ್ಲಿ ತಂದಿದ್ದ ಒಂದು ದೊಣ್ಣೆಗೆ

ಬಟ್ಟೆ ಸುತ್ತಿಕೊಂಡಿದ್ದು, ಒಂದು ಅರ್ಧ ಲೀಟರಿನ ವಾಟರ್ ಬಾಟಲಿನಲ್ಲಿ ಸೀಮೆಎಣ್ಣೆಯನ್ನು ತಂದಿದ್ದು ನಾವು ಎನು ಅನ್ನುಷ್ಟರಲ್ಲಿ ನನ್ನ ತಾಯಿಗೆ ಸೀಮೆಎಣ್ಣೆ ಎರಚಿ ಬೆಂಕಿ ಕಡ್ಡಿಯನ್ನು ಕೀರಿ, ಮನೆಯ ಹಿಂಭಾಗಕ್ಕೆ ಓಡಿ ಹೋದರು, ಅಷ್ಟರಲ್ಲಿ ತಾನು ತಡೆಯಲು ಹೋದಾಗ, ತನಗೆ ಎಡಗೈ, ಬಲಗೈ, ಮುಖ, ಕಾಲಿನ ಪಾದದ ಬಳಿ ಸುಟ್ಟ ಗಾಯಗಳಾಗಿತ್ತೆಂದು, ತಿಳಿಸಿದರು ಎಂದರೆ ಸರಿಯಲ್ಲ. ಆರೋಪಿ ಹಾಗೂ ಪ್ರಾಸಾ.1 ಮತ್ತು ಮಹದೇವಮ್ಮ ರವರ ನಡುವೆ, ಅವರ ಹೊಸ ಮನೆ ಕಟ್ಟಿಧ ವಿಚಾರದಲ್ಲಿ ಮನಸ್ತಾಪ ಇದ್ದು, ಮಹದೇವಮ್ಮ ರವರನ್ನು ಕೊಲೆ ಮಾಡುವ ಉದ್ದೇಶದಿಂದ, ಆರೋಪಿಯು ಸೀಮೆಎಣ್ಣೆ ಎರಚಿ ಬೆಂಕಿ ಹಚ್ಚಿರುವುದಾಗಿ ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ.

11. ದಿಃ 04.08.2022 ರಂದು ಘಟನೆಯ ಸಂಬಂಧದಲ್ಲಿ ಪೊಲೀಸರು, ಆರೋಪಿಯ ಮನೆಯ ಬಳಿ, ಮಹಜರ್ ಮಾಡಲು ಬಂದಿದ್ದರು ಹಾಗೂ ನಾನೇ ಸ್ಥಳವನ್ನು ತೋರಿಸಿದ್ದೆನು ಎಂದರೆ ಸಾಕ್ಷಿಯು ನಾನು ಪೊಲೀಸರಿಗೆ ಸ್ಥಳವನ್ನು ತೋರಿಸಿಲ್ಲ ಎಂದು ನುಡಿಯುತ್ತಾರೆ. ಸದರಿ ಮಹಜರ್ ಸಮಯದಲ್ಲಿ ಮುದ್ದೆ ಮಾಲು 1 ರಿಂದ 7 ವಸ್ತುಗಳನ್ನು ನನ್ನ ಸಮಕ್ಷಮದಲ್ಲಿ ಸ್ಥಳದಲ್ಲಿ ವಶಪಡಿಸಿಕೊಂಡರು ಎಂದರೆ ಸರಿಯಲ್ಲ. ಸದರಿ ಘಟನೆಯ ಸಂಬಂಧದಲ್ಲಿ ಹಾಗೂ ಪಂಚನಾಮೆಯ ವಿಚಾರಗಳ ಬಗ್ಗೆ ದಿಃ 04.08.2022 ರಂದು ಹಾಗೂ ದಿಃ 04.09.2022 ರಂದು ಪೊಲೀಸರಿಗೆ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ನನಗೆ ಗೊತ್ತಿಲ್ಲ. ದಿಃ 04.08.2022 ರ ಸಾಕ್ಷಿಗೆ ಹೇಳಿಕೆಯ ‘‘ ಸಿದ್ದೇಗೌಡರು ಅವರ ಹೆಂಡ್ತಿ ಮಹದೇವಮ್ಮ ರವರಿಗೆ ಸೀಮೆಎಣ್ಣೆ ಯನ್ನು ಮೈ ಮೇಲೆ ಎರಚಿ ಬೆಂಕಿ ಕಡ್ಡಿ ಕೀರಿ ಬೆಂಕಿ ಹಚ್ಚಿ ಓಡಿ ಹೋಗಿದ್ದು, ಆಕೆಯ ಮೈ ಮೇಲೆಲ್ಲಾ ಬೆಂಕಿ ಹರಡಿ ತಾಪವನ್ನು ತಾಳಲಾರದೇ ಕಿರುಚಿಕೊಳ್ಳುತಿದ್ದು, ’’ ಮತ್ತು ‘‘ ನಂತರ ಯಾರು ಬೆಂಕಿ ಹಚ್ಚಿದ್ದರೂ ಮತ್ತು ಗಲಾಟೆಯು ಏನು ವಿಚಾರಕ್ಕೆ ಎಂದು ಸಿದ್ದರಾಜುವನ್ನು ಕೇಳಲಾಗಿ ದಿಃ 03.08.2022 ರಂದು ಸಂಜೆ ಸುಮಾರು 7.00 ಗಂಟೆ ಸಮಯದಲ್ಲಿ ನಾನು ಮತ್ತು ತನ್ನ ತಾಯಿ ಮಹದೇವಮ್ಮ ಮನೆಯ ಹಾಲ್ ನಲ್ಲಿ ಕುಳಿತಿದ್ದಾಗ, ನಮ್ಮ ತಂದೆ ಸಿದ್ದೇಗೌಡರು ಏಕಾಏಕಿ ಮನೆಗೆ ನುಗ್ಗಿ, ಬೋಳಿ ಮಕ್ಕಳ, ಸೂಳೆ ಮಕ್ಕಳಾ, ಅವ್ವ ಮಗನಿಗೆ, ಈ ಮನೆ ಕಟ್ಟಿ ಸಾಕಾಗಿತ್ತಾ, ಈ ಮನೆ ನನ್ನದು, ನೀವಿಬ್ಬರು ಮನೆಯಿಂದ ಹೊರಗೆ ಹೋಗಿ ಎಂದು ಬೈಯುತ್ತಾ, ತನ್ನ ಜೊತೆಯಲ್ಲಿ ತಂದಿದ್ದ ಒಂದು ದೊಣ್ಣೆಗೆ ಬಟ್ಟೆ ಸುತ್ತಿಕೊಂಡಿದ್ದು, ಒಂದು ಅರ್ಧ ಲೀಟರಿನ ವಾಟರ್ ಬಾಟಲಿನಲ್ಲಿ ಸೀಮೆಎಣ್ಣೆಯನ್ನು ತಂದಿದ್ದು ನಾವು ಎನು ಅನ್ನುಷ್ಟರಲ್ಲಿ ನನ್ನ ತಾಯಿಗೆ ಸೀಮೆಎಣ್ಣೆ ಎರಚಿ ಬಂಕಿ ಕಡ್ಡಿಯನ್ನು ಕೀರಿ, ಮನೆಯ ಹಿಂಭಾಗಕ್ಕೆ ಓಡಿ ಹೋದರು, ಅಷ್ಟರಲ್ಲಿ ತಾನು ತಡೆಯಲು

ಹೋದಾಗ, ತನಗೆ ಎಡಗೈ , ಬಲಗೈ, ಮುಖ, ಕಾಲಿನ ಪಾದದ ಬಳಿ ಸುಟ್ಟ ಗಾಯಗಳಾದ್ದು, ನಮ್ಮ ತಾಯಿ ರವರಿಗೂ ಹಣೆಯ ಬಳಿ, ಎರಡು ಕಾಲುಗಳು ಎಡಗೈ, ಸೊಂಟದ ಬಳಿ ಸುಟ್ಟ ಗಾಯಗಳಾಗಿದ್ದು, ನಾನು ಮತ್ತು ನಮ್ಮ ತಾಯಿ ಕಿರುಚಿಕೊಂಡಾಗ ನೀವು ಬಂದಿರಿ ಎಂದು ತಿಳಿಸಿದನು. ನಮ್ಮ ತಂದೆ ಸಿದ್ದೇಗೌಡರವರು ಮನೆಯನ್ನು ಹೊಸದಾಗಿ ಕಟ್ಟಿರುವ ವಿಚಾರದಲ್ಲಿ ಹಾಗೂ ಆಡುಗಳು(ಮೇಕೆ) ನನಗೆ ಸೇರಬೇಕೆಂದು ಏಕಾಏಕಿ ಮನೆಯ ಒಳಗೆ ನುಗ್ಗಿ ನನ್ನನ್ನು ಹಾಗೂ ನಮ್ಮ ತಾಯಿ ಮಹದೇವಮ್ಮ ರವರನ್ನು ಕೊಲೆ ಮಾಡುವ ಉದ್ದೇಶದಿಂದ ಸೀಮೆಎಣ್ಣೆ ಎರಚಿ ಬೆಂಕಿ ಹಚ್ಚಿರುವುದಾಗಿ ವಿಚಾರ ತಿಳಿಸಿದರು. ಮಹದೇವಮ್ಮ ಮತ್ತು ಸಿದ್ದರಾಜು ರವರ ಮೇಲೆ ಸೀಮೆಎಣ್ಣೆ ಎರಚಿ ಬೆಂಕಿ ಕಡ್ಡಿ ಕೀರಿ ಬೆಂಕಿ ಹಚ್ಚಿರು ಆರೋಪಿ ಸಿದ್ದೇಗೌಡರವರನ್ನು ನೋಡಿದ್ದು, ಮತ್ತೆ ನೋಡಿದರೆ ಗುರುತಿಸುತ್ತೇನೆ. ಹಾಗೂ ಸ್ಥಳ ಮಹಜರ್ ಕಾಲದಲ್ಲಿ ಹಾಜರಿದ್ದು ಸ್ಥಳ ತೋರಿಸಿ ಸದರಿ ಮಹಜರ್ ಗೆ ನಾನು ರುಜು ಮಾಡಿರುತ್ತೇನೆ '' ಭಾಗವನ್ನು ಓದಿ ಹೇಳಿದ್ದು, ಸಾಕ್ಷಿಯು ಸದರಿ ಹೇಳಿಕೆಯ ಭಾಗಗಳನ್ನು ನಿರಾಕರಿಸಿದ್ದರಿಂದ, ಸದರಿ ಹೇಳಿಕೆಯ ಭಾಗಗಳನ್ನು ನಿಪಿ.13 ಮತ್ತು 14 ಎಂದು ಗುರುತಿಸಲಾಯಿತು.

12. ಸಾಕ್ಷಿಗೆ ದಿಃ 04.09.222 ರ ಹೇಳಿಕೆಯ ''ನಮ್ಮ ಊರಿನ ಸಿದ್ದೇಗೌಡರ ಹೆಂಡತಿ ಮಹದೇವಮ್ಮಳಿಗೆ ಆಕೆಯ ಗಂಡ ಸಿದ್ದೇಗೌಡ ದಿಃ 03.08.2022 ರಂದು ಸಂಜೆ ಸುಮಾರು 7.00 ಗಂಟೆ ಸಮಯದಲ್ಲಿ ಹೊಸ ಮನೆ ಕಟ್ಟಿಸಿದ ವಿಚಾರದಲ್ಲಿ ಹಾಗೂ ಆಡಗಳು ನನಗೆ ಸೇರಬೇಕೆಂದು ಆಗಾಗ್ಗೆ ಗಲಾಟೆ ಮಾಡುತ್ತಿದ್ದ ರೀತಿ, ಮನೆಯ ಒಳಗೆ ನುಗ್ಗಿ, ಮನೆಯ ಹಾಲ್ ನಲ್ಲಿ ಕುಳಿತಿದ್ದ ಮಗ ಸಿದ್ದರಾಜು ಮತ್ತು ಹೆಂಡತಿ ಮಹದೇವಮ್ಮಳಿಗೆ, ಏಕಾಏಕಿ ಬೋಳಿ ಮಕ್ಕಳ, ಸೂಳೆ ಮಕ್ಕಳಾ, ಅವ್ವ ಮಗನಿಗೆ , ಈ ಮನೆ ಕಟ್ಟಿ ಸಾಕಾಗಿತ್ತಾ, ಈ ಮನೆ ನನ್ನದು, ನೀವಿಬ್ಬರು ಮನೆಯಿಂದ ಹೊರಗೆ ಹೋಗಿ ಎಂದು ಮಹದೇವಮ್ಮಳನ್ನು ಕೊಲೆ ಮಾಡುವ ಉದ್ದೇಶದಿಂದ ತಾನು ಜೊತೆಯಲ್ಲಿ ತಂದಿದ್ದ ಬಾಟಲಿನಲ್ಲಿ ತಂದಿದ್ದ ಸೀಮೆಎಣ್ಣೆಯನ್ನು ಮಹದೇವಮ್ಮಳ ಮೈ ಮೇಲೆ ಎರಚಿ, ತಾನು ಜೊತೆಯಲ್ಲಿ ತಂದಿದ್ದ ಬಟ್ಟೆ ಸುತ್ತಿಕೊಂಡು ತಂದಿದ್ದ ದೊಣ್ಣೆಗೆ ಬೆಂಕಿ ಕಡ್ಡಿ ಕೀರಿ ಹೊತ್ತಿಸಿ, ಮಹದೇವಮ್ಮ ಳಿಗೆ ಬೆಂಕಿ ಹೊತ್ತಿಸಿದಾಗ, ಆರಿಸಿಸಲು ಹೋದ ಮಗ ಸಿದ್ದರಾಜುವಿಗೂ ಮತ್ತುಮಹದೇವಮ್ಮಳಿಗೂ ಸುಟ್ಟ ಗಾಯಗಳಾಗಿ, ಇಬ್ಬರೂ ಕೂಗಿಕೊಂಡಾಗ, ನಾನು, ನನ್ನ ಗಂಡ ಮತ್ತು ಅಲ್ಲಿದ್ದವರು ಓಡಿ ಬಂದು ಬೆಂಕಿ ಆರಿಸಿ, ಚಿಕಿತ್ಸೆಗಾಗಿ ಆಂಬುಲೆನ್ಸ್ ನಲ್ಲಿ ಆಸ್ಪತ್ರೆ ಗೆ ಕಳುಹಿಸಿದ ಸಾಕ್ಷಿಯು ಬಗ್ಗೆ ನಾನು ಈಗಾಗಲೇ ದಿಃ 04.08.2022 ರಂದು ಬೆಳಕವಾಡಿ ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುವುದು ಸರಿಯಷ್ಟೆ, ಈ ದಿನ ಮುಂದುದವರೆದು

ಹೇಳುವುದೇನೆಂದರೆ , ದಿಃ 03.08.2022 ರಂದು ಸಂಜೆ 7.00 ಗಂಟೆ ಸಮಯದಲ್ಲಿ ನಾನು ಮತ್ತು ನನ್ನ ಗಂಡ ಸಿದ್ದೇಗೌಡರ ಮನೆಗೆ ಹೋಗಿ ಬೆಂಕಿ ಹತ್ತಿಕೊಂಡು ಕಿರುಚಾಡುತ್ತಿದ್ದ ಸಿದ್ದೇಗೌಡರ ಹೆಂಡತಿ ಮಹದೇವಮ್ಮ ಮತ್ತು ಮಗ ಸಿದ್ದರಾಜುವಿನ ಮೈ ಮೇಲಿನ ಬೆಂಕಿಯನ್ನು ಆರಿಸಿದ ನಂತರ ಉಪಚರಿಸಿ, ಬೆಂಕಿಯಿಂದ ಸುಟ್ಟು ಹೋಗಿದ್ದ ಮಹದೇವಮ್ಮ ಮತ್ತು ಸಿದ್ದರಾಜುವಿನ ಮೈ ಮೇಲಿನ ಬಟ್ಟೆಯನ್ನು ಬಿಚ್ಚಿ ನಂತರ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇವೆ. ಕೃತ್ಯ ನಡೆದ ಸಮಯದಲ್ಲಿ ನಾನು ಮತ್ತು ನನ್ನ ಗಂಡ ಅಲ್ಲದೇ ನಮ್ಮ ಊರಿನ ನಮ್ಮ ಜನಾಂಗದ ಮನು ಕುಮಾರ ಮತ್ತು ಒಕ್ಕಲಿಗ ಜನಾಂಗದ ಜಿ. ನಾರಾಯಣ ಎಂಬುವರೂ ಸಹಾ ಬಂದು ಗಾಯಾಳುವನ್ನು ಆಸ್ಪತ್ರೆಗೆ ಕಳುಹಿಸಲು ಹಾಗೂಉಪಚರಿಸಲು ಸಹಕರಿಸಿರುತ್ತಾರೆ. ದಿಃ 04.08.2022 ರಂದು ಸಂಜೆ ಬೆಳಕವಾಡಿ ಪೊಲೀಸರು ಸ್ಥಳ ಮಹಜರ್ ಗೆ ಬಂದಾಗ ಕೃತ್ಯ ನಡೆದ ಸ್ಥಳವನ್ನು ತೋರಿಸಿ, ಸ್ಥಳದಲ್ಲಿ ಇದ್ದ ಬಟ್ಟೆಗಳು, ದೊಣ್ಣೆ ಮತ್ತು ಸೀಮೆಎಣ್ಣೆ ಬಾಟೆಲ್ ಮತ್ತು ಬೆಂಕಿ ಕಡ್ಡಿ ಪೊಟ್ಟಣವನ್ನು ಪೊಲಿಸರಿಗೆ ತೋರಿಸಿರುತ್ತೇನೆ. ಪೊಲೀಸರು ಎಲ್ಲಾ ವಸ್ತುಗಳನ್ನು ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ ಸೀಲು ಮಾಡಿ ಅಮಾನತ್ತು ಪಡಿಸಿಕೊಂಡರು. ಪೊಲೀಸರು ಸ್ಥಳದ್ಲಿಯೇ ಬರೆದ ಮಹಜರ್ ಗೆ ನಾನೂ ಕೂಡ ಸಹಿ ಮಾಡಿರುತ್ತೇನೆ. ಬೆಂಕಿಯಿಂದ ಸುಟ್ಟ ಗಾಯಗಳಾಗಿದ್ದ ಮಹದೇವಮ್ಮ ಮತ್ತು ಆಕೆಯ ಮಗ ಸಿದ್ದರಾಜು, ಮಳವಳ್ಳಿ ಮತ್ತು ಮೈಸೂರಿನ ಕೆ. ಆರ್. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ನಂತರ ಮನೆಗೆ ಬಂದು ಮನೆಯಲ್ಲಿಯೇ ಔಷದೋಪಚಾರಗಳನ್ನು ವೈಧ್ಯರು ಹೇಳಿದಂತೆ ತೆಗೆದುಕೊಳ್ಳುತ್ತಿದ್ದು,ಮಹದೇವಮ್ಮ ಚಿಕಿತ್ಸೆಯಿಂದ ಗುಣಮುಖರಾಗದೇ ದಿಃ 30.08.2022 ರಂದು ಸಂಜೆ ಸುಮಾರು 6.00 ಗಂಟೆ ಸಮಯದಲ್ಲಿ ನಮ್ಮ ಊರಿನ ಮನೆಯಲ್ಲಿಯೇ ಸತ್ತು ಹೋಗಿರುತ್ತಾಳೆ. ಮಹದೇವಮ್ಮಳಿಗೆ ಮುಖ, ತೊಡೆ, ಕಾಲುಗಳು ಮತ್ತು ಬೆನ್ನಿಗೆ ಮತ್ತು ಸಿದ್ದರಾಜುವಿಗೆ ಮುಖ ಹಾಗೂ ಎಡತೋಳಿಗೆ ಸುಟ್ಟ ಗಾಯಗಳಾಗಿದ್ದವು. ಮಹದೇವಮ್ಮಳ ಗಂಡ ಸಿದ್ದೇಗೌಡ ಹೊಸ ಮನೆ ಕಟ್ಟಿಸಿದ್ದ ವಿಚಾರದಲ್ಲಿ, ಹಾಗೂ ಆಡಗಳು ತನ್ನದು ಎಂದು ಏಕಾಏಕಿ ಜಗಳ ತೆಗೆದು ಬೈದು, ಮಹದೇವಮ್ಮಳ ಮೈ ಮೇಲೆ ಸೀಮೆಎಣ್ಣೆ ಎರಚಿ, ಬೆಂಕಿ ಹಚ್ಚಿ ಸುಟ್ಟು ಕೊಲ ಮಾಡಿರುತ್ತಾನೆ. ನಾನು ಕೃತ್ಯ ನಡೆದ ಸ್ಥಳವನ್ನು ಮತ್ತು ಅಲ್ಲಿದ್ದ ವಸ್ತುಗಳನ್ನು ತೋರಿಸಿದ ವೇಳೆ ಪೊಲೀಸರು ಮಹಜರ್ ಜರುಗಿಸಿ ಅಮಾನತ್ತು ಪಡಿಸಿಕೊಂಡ ವಸ್ತುಗಳನ್ನು ಮತ್ತೆ ನೋದರೆ ಗುರುತಿಸುತ್ತೇನೆ '' ಭಾಗವನ್ನು ಓದಿ ಹೇಳಿದ್ದು, ಸಾಕ್ಷಿಯು ಸದರಿ ಹೇಳಿಕೆಯ ಭಾಗವನ್ನು ನಿರಾಕರಿಸಿದ್ದರಿಂದ, ಸದರಿ ಹೇಳಿಕೆಯ ಭಾಗವನ್ನು ನಿಪಿ.15 ಎಂದು ಗುರುತಿಸಲಾಯಿತು.

13. ಆರೋಪಿಯ ಮಗಳು ಸವಿತಾ ಗೊತ್ತು ಎಂದರೆ ಸರಿ. ಆಕೆ ಮೈಸೂರಿನಲ್ಲಿ ಇದ್ದಾಳೆ. ಪ್ರಾಸಾ.1 ರವರು ಈಗ ಎಲ್ಲಿ ಇದ್ದಾರೆ ಎಂದು ನನಗೆ ಗೊತ್ತಿಲ್ಲ. ಮಹದೇವಮ್ಮ ರವರ ತಂಗಿ ನಾಗಮ್ಮ ನನಗೆ ತಿಳಿದಿಲ್ಲ. ಸವಿತಾ ರವರು ನನಗೆ ಫೋನ್ ಮಾಡಿಲ್ಲ. ಸದರಿ ಘಟನೆ ನಡೆದ ಮನೆಯಲ್ಲಿ ಈಗ ಯಾರುೂ ಇಲ್ಲ. ಪ್ರಾಸಾ.1 ರವರಿಗೆ ಮದುವೆ ಮಾಡಿಸಿ, ಜೀವನ ಸರಿ ಮಾಡಬೇಕೆಂದು, ಸವಿತಾರವರು ನಮ್ಮನ್ನು ಹಾಗೂ ಗ್ರಾಮಸ್ಥರನ್ನು ಕೇಳಿದ್ದರು ಎಂದರೆ ಗೊತ್ತಿಲ್ಲ. ನನ್ನ ಗಂಡ, ಊರಿನಲ್ಲಿ ಯಜಮಾನಿಕೆಯನ್ನು ಮಾಡುತ್ತಿರುವುದರಿಂದ, ನಮ್ಮನ್ನು ಸಹ ಸವಿತಾ ರವರು ಭೇಟಿಯಾಗಿದ್ದಾರೆ ಎಂದರೆ ಸರಿಯಲ್ಲ. ಮಹದೇವಮ್ಮ ರವರಿಗೆ ಆರೋಪಿಯು ಬೆಂಕಿ ಹಚ್ಚಿದ್ದು ಗೊತ್ತಿದ್ದರೂ ಸಹ ಸದರಿ ಕಾರಣಗಳಿಂದ ಸವಿತಾ ಮತ್ತು ನಾಗಮ್ಮ ರವರಕೋರಿಕೆಯಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಃ ಆರೋಪಿಯ ಪರವಾಗಿ ಶ್ರೀಮತಿ ಎಸ್ ಎನ್ ಬಿ ವಕೀಲರು, Assistant defence counsel ರವರಿಂದ ಃ</u>**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರು ವಿಚಾರಣೆಃ</u> ಏನು ಇಲ್ಲ**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.